ಹೊಡೆದ ಫೆಮಿನಿಸ್ಟ್ ಕವಿತೆ/ ಆಕಾಶದ ಕಡೆ ಮುಖಮಾಡಿ ಹಸ್ತಮೈಥುನ ಮಾಡಿಕೊಳ್ಳುತ್ತಿರುವ ಬ್ರಹ್ಮಚಾರಿ ಕವಿ/ ಇದು ಹೈದರಾಬಾದ್!/ ರಸ್ತೆಗಳಾಗಿ ಸೀಳಿದ ಮಾಂಸದ ಮುದ್ದೆ."

ಈ ನಾಲ್ಕು ಸಾಲುಗಳನ್ನು ಓದುತ್ತಲೇ ಸಲೀಮನಿಗೆ ಕೆಲಸ ಕೊಟ್ಟೇ ಬಿಟ್ಟರು.

ಪತ್ರಿಕಾ ಜಗತ್ತು ವಿಚಿತ್ರ. ಅಲ್ಲಿ ಕತೆಗಳಿಗೆ, ಕವಿತೆಗಳಿಗೆ, ಸುದ್ದಿಗಳಿಗೆ, ಮೀಟಿಂಗ್‌ಗಳಿಗೆ, ಪುಸ್ತಕ ಬಿಡುಗಡೆ ಸಮಾರಂಭಗಳಿಗೆ ಬೇಡಿಕೆ. ಒಂದು ಕವಿತೆ ಬರೆದು, ಒಂದಿಷ್ಟು ದಾಡಿ ಬೆಳೆಸಿ, ಭುಜಕ್ಕೆ ಚೀಲ ನೇತು ಹಾಕಿಕೊಂಡು, ಚೀಲದಲ್ಲಿ ನಾಲ್ಕೈದು ಬಗೆಯ ಚಳವಳಿಗಳ ಕರಪತ್ರಗಳನ್ನು ತುರುಕಿಕೊಂಡು ಅಡ್ಡಾಡುವುದು ಒಂದು ಫ್ಯಾಶನ್.

ಎರಡನೆಯ ದಿನ ಕ್ಯಾಂಟೀನ್‌ನಲ್ಲಿ ಸಹೋದ್ಯೋಗಿಗಳು, "ಇಲ್ಲಿ ಜಾತಿಗಳಿಂದ ಅಥವಾ ಧರ್ಮಗಳಿಂದ ಪರಿಚಯ ಮಾಡಿಕೊಳ್ಳುತ್ತೇವೆ. ಇದು ಪೋಸ್ಟ್ ಮಾಡರ್ನ್ ಸಂಪ್ರದಾಯ" ಎಂದರು. "ನಿಮ್ಮ ಹೆಸರು... ಸಲೀಂ ಸುಂದರ್, ವಿಚಿತ್ರವಾಗಿದೆಯೆಲ್ಲಾ?" ಎಂದರು ಹುಬ್ಬು ಗಂಟಿಕ್ಕುತ್ತಾ.

"ಊರಲ್ಲಿ ತುಂಬಾ ಗಲಾಟೆ, ಮುಸ್ಲಿಮರು ಕಟ್ಟಿಕೊಂಡ ಮನೆಗಳು ಅತಿಕ್ರಮಣ ಮಾಡಿದ ಭೂಮಿಗಳಲ್ಲಿ ಕಟ್ಟಿದವು ಎಂದು ಅವುಗಳನ್ನು ಒಡೆಯಲು ಮುಂದಾಗಿದ್ದರು. ನನ್ನ ಮೇಲೆ ಅರೆಸ್ಟ್ ವಾರೆಂಟ್ ಇತ್ತು. ಕೊಲೆ ಕೇಸಿನಲ್ಲಿ ಸಿಕ್ಕಿಸಿದರು. ನಾನು, ಅಮ್ಮಿ ಇಬ್ಬರೇ ಇದ್ದಿದ್ದು. ಅಮ್ಮಿಗೆ ವಾಸಿಯಾಗದ ಕಾಯಿಲೆ. ಏನೂ ನೆನಪಿರುವುದಿಲ್ಲ. ಮನುಷ್ಯರನ್ನು ಗುರುತು ಹಿಡಿಯುವುದಿಲ್ಲ. ಹಸಿವೆ ಊಟದ ಬಗ್ಗೆ ಪರಿವೇ ಇರುವುದಿಲ್ಲ. ಏನು ಮಾಡಬೇಕೆಂದು ತೋಚದೇ ಇಲ್ಲಿಗೆ ಓಡಿಬಂದೆವು."

ಟೀ ಹೀರುತ್ತಾ, ಒಂದೇ ಸಿಗರೇಟನ್ನು ನಾಲ್ಕೈದು ಜನ ಶೇರ್ ಮಾಡಿಕೊಳ್ಳುತ್ತಾ ಸುತ್ತಲೂ ನಿಂತಿದ್ದ ಯಾವ ಪತ್ರಕರ್ತರ ತಲೆಯೊಳಕ್ಕೂ ಆ ಕತೆ ಇಳಿಯಲಿಲ್ಲ. 'ಇಂತಹ ಕತೆಗಳನ್ನು ತುಂಬಾ ಕೇಳಿದ್ದೇವೆ' ಎಂಬಂತೆ ನೋಡಿ 'ಸ್ವಲ್ಪ ವಯಲೆನ್ಸ್, ಫೈಟಿಂಗ್ ಗೊತ್ತಿರುವ ಕವಿ ಅಂದ ಹಾಗಾಯ್ತು. ಯಾವುದಾದರೊಂದು ಸಾಹಿತ್ಯ ಸಭೆಯಲ್ಲಿ ನಮಗೆ ಕೆಲಸಕ್ಕೆ ಬರುತ್ತೆ' ಎಂದು ಗಂಭೀರವಾಗಿ ಹೇಳಿದರು.

ಟ್ರಾನ್ಸ್‌ನಲ್ಲಿದ್ದ ಸಲೀಂ ಭುಜದ ಮೇಲೆ ಬೆಚ್ಚನೆ ಕೈಯೊಂದು ಬಿತ್ತು. ಮನೋರಮ ಹಸಿರು ಬಣ್ಣದ ಜರ್ಕಿನ್ ಹೆಗಲ ಮೇಲೆ ಹಾಕಿಕೊಂಡು, "ನಡೀ ಕ್ಯಾಂಟೀನ್‌ಗೆ ಹೋಗೋಣ" ಎಂದು ಮುಂದಕ್ಕೆ ನಡೆದಳು. ಆಕೆಯ ಜರ್ಕಿನ್ ತೆಗೆದುಕೊಂಡು, ಜಾಡಿಸಿ ತನ್ನ ಹೆಗಲ ಮೇಲೆ ಹಾಕಿಕೊಂಡ. ಮನೋರಮಳ ಕೈ ತುಂಬಾ ಪುಸ್ತಕಗಳು. ಎರಡು ಕಪ್ ಟೀ ತಂದುಕೊಂಡು ಮೂಲೆಯ ಕುರ್ಚಿಗಳಲ್ಲಿ ಕೂತರು. ಇನ್ನೊಂದು ಮೂಲೆಯಲ್ಲಿ ಒಬ್ಬ ವೃದ್ಧಪ್ರೊಫೆಸರ್, ಮಳೆಯಲ್ಲಿ ಸಿಗರೇಟ್ ಹೊಗೆ ಬಿಡುತ್ತಾ ಜೋರು ದನಿಯಲ್ಲಿ ಇಂಗ್ಲಿಷ್ ಕಾವ್ಯ ಓದುತ್ತಿದ್ದ. ಮನೋರಮ ಟೀ ಸಿಪ್ ಮಾಡುತ್ತಿದ್ದಳು. ಆಕೆಯ ದೇಹದಿಂದ ಹೊಮ್ಮುತ್ತಿದ್ದ ಪರ್‌ಫ್ಯೂಮ್ ಪರಿಮಳ ಸಣ್ಣ ತೆರೆಯಂತೆ ಅವನ ಮೂಗಿಗೆ ಬಡಿಯುತ್ತಿತ್ತು. ಆ ಪರಿಮಳಕ್ಕೆ ಜೊತೆಯಾಗಿ ತುಂತುರು ಮಳೆ ಗೋಡೆಯ ಮೇಲೆ ಬಿದ್ದು, ತೇವದ ಮಣ್ಣಿನ ವಾಸನೆಯೊಂದಿಗೆ ಮತ್ತೇರಿಸುತ್ತಿತ್ತು.

"ಹೊಸ ಕವಿತೆಗಳನ್ನು ಏನಾದರೂ ಬರೆದೆಯಾ?" ಎಂದಳು ಮನೋರಮ, ಸ್ವಗತದಂತೆ. ಸಿಗರೇಟ್ ಹೊತ್ತಿಸಿಕೊಂಡು ಇಬ್ಬರ ನಡುವಿನ ಮೌನದೊಳಕ್ಕೆ ಮೆಲ್ಲಗೆ ಹೊಗೆ ಬಿಡತೊಡಗಿದ